ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 761

ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ

ಉತ್ತರಿಸಬೇಕಾದ ದಿನಾಂಕ : 05.03.2021

ಉತ್ತರಿಸುವವರು : ಮಾನ್ಯ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಧಾರವಾಡದಿಂದ ಬೆಳಗಾವಿಗೆ ಪ್ರಯಾಣ ಮಾಡಲು ಪ್ರಸ್ತುತ ಇರುವ ರೈಲು ಮಾರ್ಗದ ಬದಲಾಗಿ ನೇರವಾದ ರೈಲು ಮಾರ್ಗವನ್ನು ನಿರ್ಮಾಣ ಮಾಡಲು ಕೇಂದ್ರ ಸರ್ಕಾರವು ನಿರ್ಧರಿಸಿರುವುದು ನಿಜವೇ; ಹಾಗಿದ್ದಲ್ಲಿ ಮಾರ್ಗದಿಂದ ಪ್ರಯಾಣಕ್ಕೆ ತಗಲುವ ಸಮಯ ಎಷ್ಟು;	ಹೌದು. ಈ ಎರಡು ನಗರಗಳ ನಡುವಿನ ರೈಲು ಪ್ರಯಾಣದ ಸಮಯ 31 ಕಿ.ಮೀ ಗಳಷ್ಟು ಕಡಿಮೆಯಾಗುತ್ತದೆ.
ಆ.	ಈ ಹೊಸ ರೈಲು ಮಾರ್ಗ ನಿರ್ಮಾಣಕ್ಕೆ ತಗಲುವ ವೆಚ್ಚವೆಷ್ಟು;	ಧಾರವಾಡ-ಬೆಳಗಾವಿ ನೂತನ ರೈಲು ಮಾರ್ಗದ ನಿರ್ಮಾಣ ಕಾಮಗಾರಿ ಒಟ್ಟು ಅಂದಾಜು ಮೊತ್ತ ರೂ. 988.30 ಕೋಟಿಗಳು.
ಇ.	ಸದರಿ ರೈಲು ಮಾರ್ಗಕ್ಕೆ ಸಂಬಂದಿಸಿದಂತೆ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ;	ಧಾರವಾಡ-ಬೆಳಗಾವಿ ನೂತನ ರೈಲು ಮಾರ್ಗದ ನಿರ್ಮಾಣ ಕಾಮಗಾರಿಗೆ ಒಟ್ಟು 335 ಎಕರೆ ಜಮೀನಿನ ಅಗತ್ಯವಿದೆ.
ಈ	ಹೊಸ ಮಾರ್ಗ ನಿರ್ಮಾಣಕ್ಕೆ ತಗಲುವ ವೆಚ್ಚದಲ್ಲಿ ರಾಜ್ಯ ಸರ್ಕಾರ ಭರಿಸಬೇಕಾದ ಹಣಕಾಸಿನ ಪ್ರಮಾಣವೆಷ್ಟು; ಇದಕ್ಕಾಗಿ ಸರ್ಕಾರ ಎಷ್ಟು ಹಣವನ್ನು ಕಾಯ್ದಿರಿಸಿದೆ;	ಈ ನೂತನ ರೈಲು ಮಾರ್ಗ ಯೋಜನೆಯ ಅಂದಾಜು ವೆಚ್ಚ ರೂ. 988.30 ಕೋಟಿಗಳಾಗಿದ್ದು, ಇದರ ಶೇ.50 ರಷ್ಟು ಅಂದರೆ ರೂ.494.15 ಕೋಟಿಗಳನ್ನು ರಾಜ್ಯ ಸರ್ಕಾರವು ಭರಿಸಬೇಕಾಗಿರುತ್ತದೆ. ಈ ಯೋಜನೆಯ ವಿಸ್ತೃತ ಯೋಜನಾ ವರದಿಯು ಸಿದ್ಧಪಾಗುತ್ತಿದ್ದು ರೈಲ್ವೆ ಇಲಾಖೆಯು ನಿಖರವಾದ ಅಂದಾಜು ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ನಂತರ ಯೋಜನೆಗೆ ಅಗತ್ಯವಿರುವ ಅನುದಾನವನ್ನು ಕಾಯ್ದಿರಿಸಲು ಕ್ರಮವಹಿಸಲಾಗುವುದು.
ಉ	ಈ ಹೊಸ ರೈಲು ಮಾರ್ಗವನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)	ರೈಲ್ವೆ ಇಲಾಖೆಯು ಈ ಕಾಮಗಾರಿಯನ್ನು ಕಾರ್ಯನ್ವಯಗೊಳಿಸಲು ಪ್ರಸ್ತುತದಲ್ಲಿ ವಿಸ್ತೃತ ಅಂದಾಜು ವರದಿಯನ್ನು (ಡಿಪಿಆರ್) ಸಿದ್ಧ ಪಡಿಸುತ್ತಿದ್ದು, ನಂತರ ಭೂಸ್ವಾಧೀನ ಪ್ರಕ್ರಿಯೆಯನ್ನು ಆರಂಭಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿರುವುದರಿಂದ ಸಧ್ಯದಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗಧಿ ಪಡಿಸುವುದು ಸಾಧ್ಯವಿರುವುದಿಲ್ಲ.

ಸಂಖ್ಯೆ: ಮೂಅಇ 40 ರಾರಾಹೆ 2021/ಇ

(ಆನಂದ ಸಿಂಗ್)

ಮೂಲಸೌಲಭ್ಯ ಅಭಿವೃದ್ಧಿ, ವಕ್ಫ್ ಮತ್ತು ಹಜ್ ಸಚಿವರು